ಶ್ರೀ ಬಿ.ಆರ್. ಯಾವಗಲ್: ಮಾನ್ಯ ಉಪಾಧ್ಯಕ್ಷರೆ, ನಾವೆಲ್ಲ ಕಾಯುತ್ತಿದ್ದೇವೆ. Zero hour ತೆಗೆದುಕೊಳ್ಳಿ.

ಶ್ರೀ ಬಿ.ಆರ್. ಪಾಟೀಲ್: ಮಾನ್ಯ ಅಧ್ಯಕ್ಷರೆ, quorum ಇಲ್ಲ.

ಉಪಾಧ್ಯಕ್ಷರು: ಕೋರಂ ಇಲ್ಲವೆಂದರೆ close ಮಾಡುತ್ತೇವೆ, ಅಷ್ಟೆ.

ಡಾ॥ ಶಿವರಾಜ್ ಪಾಟೀಲ್: ಮಾನ್ಯ ಉಪಾಧ್ಯಕ್ಷರೆ, ಗಮನ ಸೆಳೆಯುವ ಸೂಚನೆ ತೆಗೆದುಕೊಳ್ಳಿ. ನಾಳೆಗೆ time ಇಲ್ಲ.

ಶ್ರೀ ಬಿ.ಆರ್. ಯಾವಗಲ್: ಮಾನ್ಯ ಉಪಾಧ್ಯಕ್ಷರೆ, zero hour ತೆಗೆದುಕೊಳ್ಳಿ.

ಶ್ರೀ ಡಿ.ಎನ್. ಜೀವರಾಜ್: ಮಾನ್ಯ ಉಪಾಧ್ಯಕ್ಷರೆ, ಆ ರೀತಿಯೂ ಮಾಡಬಹುದು, ಈಗ ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಂಡು, ಉಳಿದದ್ದನ್ನು ನಾಳೆಗೆ ತೆಗೆದುಕೊಳ್ಳಬಹುದು.

(ಗೊಂದಲ)

2. ವಿಷಯ: ಮಂಡ್ಯ ಜಿಲ್ಲೆಯಲ್ಲಿ ಅಕ್ರಮವಾಗಿ ನಡೆಯುತ್ತಿರುವ ಗಣಿಗಾರಿಕೆಯ ಬಗ್ಗೆ.

****

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಮೇಲುಕೋಟೆ): ಮಾನ್ಯ ಉಪಾಧ್ಯಕ್ಷರೆ, ನಿಯಮ 69ರಲ್ಲಿ ನಾನು ಈ ವಿಷಯವನ್ನು ಪ್ರಸ್ತಾಪಿಸಲು ನೋಟಿಸ್ ಕೊಟ್ಟಿದ್ದೇನೆ. ಇದರಲ್ಲಿ 200–300 ಕೋಟಿ ರೂ.ಗಳು ಅನ್ಯಾಯವಾಗಿದೆ. ಇದರ ಬಗ್ಗೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆಗೆ ಸಂಬಂಧಪಟ್ಟ ಮಂತ್ರಿಯವರು ಸಮಂಜಸವಾದ ಉತ್ತರವನ್ನು ಕೊಡಬೇಕು. ಈ ಬಗ್ಗೆ ಸಿ.ಓ.ಡಿ. ತನಿಖೆ ಮಾಡಬೇಕೆಂದು ನಮ್ಮ ಒತ್ತಾಯವಿದೆ. ಅಕ್ರಮ ಗಣಿಗಾರಿಕೆಯಾಗಿ ಸರ್ಕಾರದ ಬೊಕ್ಕಸಕ್ಕೆ ಬರಬೇಕಾದಂಥ ಹಣ ಹೋಗುತ್ತಿದೆ. ಈಗ ಕೊಟ್ಟಿರುವಂಥ ವರದಿಯಲ್ಲಿ ಕೇವಲ 30 ಕೋಟಿ ರೂ.ಗಳ ರಾಯಲ್ಟಿ ವಸೂಲಿ ಮಾಡಬೇಕೆಂದು ಹೇಳಿದೆ. ಅಲ್ಲಿ ಗಣಿಗಾರಿಕೆಗೆ 10–20 ಎಕರೆ

ಕೊಟ್ಟಿರುವಂಥ ಪ್ರದೇಶವನ್ನು, 60–70 ಎಕರೆಗಳಷ್ಟು ದುರುಪಯೋಗಪಡಿಸಿಕೊಂಡು ಪ್ರಾಕೃತಿಕ ಸಂಪತ್ತನ್ನು ಲೂಟಿ ಮಾಡಿ, ಬಹಳ ದೊಡ್ಡ ಸ್ಫೋಟಕ ವಸ್ತುಗಳನ್ನು ಉಪಯೋಗಿಸಿ, ಸುತ್ತಮುತ್ತಲೂ 7–8 ಹಳ್ಳಿಗಳೆಲ್ಲಾ ನಡುಗುವಂಥ ಕೆಲಸವನ್ನು ಮಾಡುತ್ತಿದ್ದಾರೆ. ಇದಕ್ಕೆ ಸಿ.ಓ.ಡಿ. ತನಿಖೆಯಾಗಬೇಕು, ಈ ಬಗ್ಗೆ ಚರ್ಚೆ ಸಂದರ್ಭದಲ್ಲಿ ಸಂಬಂಧಪಟ್ಟ ಮಂತ್ರಿಗಳಿದ್ದರೆ ಒಳ್ಳೆಯದು. ಇದು ಸಣ್ಣ ವಿಷಯವಲ್ಲ, ಇದು ಸರ್ಕಾರದ ಬೊಕ್ಕಸಕ್ಕೆ ಬರಬೇಕಾದಂಥ ಹಣ ಕುರಿತಾಗಿದೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್: ಮಾನ್ಯ ಉಪಾಧ್ಯಕ್ಷರೆ, ಇದು ಗಣಿಗಾರಿಕೆ ಇಲಾಖೆಯದ್ದಾಗಿದೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: ಸರ್ಕಾರದಿಂದ ಉತ್ತರವನ್ನು ಕೊಡಿ.

ಉಪಾಧ್ಯಕ್ಷರು: ನಾಳೆ ಉತ್ತರವನ್ನು ಕೊಡಿಸೋಣ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: ಮಾನ್ಯ ಉಪಾಧ್ಯಕ್ಷರೆ, ಇದು ಬಹಳ ಮುಖ್ಯವಾದ ವಿಷಯವಾಗಿದ್ದು, ಇದರ ಬಗ್ಗೆ 15–20 ನಿಮಿಷಗಳು ಚರ್ಚೆ ಮಾಡಿ ಹೇಳಬೇಕಾಗಿದೆ. ಇದನ್ನು ಸಿ.ಓ.ಡಿ. ತನಿಖೆಗೆ ಕೊಡಲೇಬೇಕು. ಈಗಾಗಲೇ ಈ ಬಗ್ಗೆ ಎರಡನೇ ಬಾರಿ ಇಲ್ಲಿ ಚರ್ಚೆ ಮಾಡುತ್ತಿದ್ದೇವೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್: ಈ ಎರಡೂ ವಿಷಯಗಳಿಗೂ ಉತ್ತರವನ್ನು ನಾಳೆ ಕೊಡಿಸುತ್ತೇನೆ.

ಶ್ರೀ ಡಿ.ಎನ್. ಜೀವರಾಜ್: ಮಾನ್ಯ ಪುಟ್ಟಣ್ಣಯ್ಯನವರಿಗೆ ನನ್ನ ಸಲಹೆ ಏನೆಂದರೆ, ತಾವು ಬಹಳ ಗಂಭೀರವಾದ ವಿಷಯವನ್ನು ಪ್ರಸ್ತಾಪ ಮಾಡಿದ್ದೀರಿ, concerned minister ಇದ್ದಾಗ ಇದನ್ನು ಚರ್ಚೆ ಮಾಡಿದರೆ ಒಳ್ಳೆಯದು.

ಉಪಾಧ್ಯಕ್ಷರು: ನಾಳೆ ಈ ವಿಷಯವನ್ನು ತೆಗೆದುಕೊಳ್ಳೋಣ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: ಮಾನ್ಯ ಉಪಾಧ್ಯಕ್ಷರೆ, ದಯವಿಟ್ಟು ಇದಕ್ಕೆ ನಾಳೆ ಉತ್ತರವನ್ನು ಕೊಡಿಸಬೇಕು.

ಉಪಾಧ್ಯಕ್ಷರು: ಆಯಿತು, ನಾಳೆ ಅಜೆಂಡಾ ಪಟ್ಟಿಗೆ ಹಾಕಿಸೋಣ. ಈಗ ಗಮನ ಸೆಳೆಯುವ ಸೂಚನೆಗಳನ್ನು ತೆಗೆದುಕೊಳ್ಳೋಣ. ಡಾ॥ ಕೆ. ಸುಧಾಕರ್ ಇಲ್ಲ.

ಶ್ರೀ ಬಿ.ಆರ್. ಯಾವಗಲ್: ಮಾನ್ಯ ಉಪಾಧ್ಯಕ್ಷರೆ, zero hour ತೆಗೆದುಕೊಳ್ಳಿ.

ಉಪಾಧ್ಯಕ್ಷರು: ನಾಳೆ ತೆಗೆದುಕೊಳ್ಳೋಣ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: ಇಲ್ಲಿ ಯಾರು ಇದ್ದಾರೆ? ವಿಧಾನಸೌಧವೇ zero ಆಗಿ ಕುಳಿತಿದೆ.

ಡಾ॥ ಶಿವರಾಜ್ ಪಾಟೀಲ್: ಮಾನ್ಯ ಉಪಾಧ್ಯಕ್ಷರೆ, ಗಮನ ಸೆಳೆಯುವ ಸೂಚನೆ ತೆಗೆದುಕೊಳ್ಳಿ.

ಉಪಾಧ್ಯಕ್ಷರು: ಅದನ್ನೇ ತೆಗೆದುಕೊಂಡಿದ್ದೇನೆ. ಮಾನ್ಯ ವಿಶ್ವನಾಥ (ಆನಂದ) ಚಂದ್ರಶೇಖರ ಮಾಮನಿಯವರು ಇಲ್ಲ, ಮಾನ್ಯ ನಾರಾಯಣಗೌಡರವರು ಇಲ್ಲ, ಮಾನ್ಯ ಸಾ.ರಾ.ಮಹೇಶ್‌ರವರು ಇಲ್ಲ.

11. ಗಮನ ಸೆಳೆಯುವ ಸೂಚನೆಗಳು

1. **ವಿಷಯ:** ವಿಜಯಪುರ ಜಿಲ್ಲೆಯ ಸಿಂಧಗಿ ಮತಕ್ಷೇತ್ರವನ್ನು ಆರ್.ಐ.ಡಿ.ಎಫ್–20ರಲ್ಲಿ ಕಾಮಗಾರಿಗೆ ನಬಾರ್ಡ್ ಯೋಜನೆಯಡಿ ಹೊರತುಪಡಿಸಿರುವ ಬಗ್ಗೆ.

****

ಶ್ರೀ ರಮೇಶ ಬಾಳಪ್ಪ ಭೂಸನೂರ (ಸಿಂಧಗಿ): ಮಾನ್ಯ ಉಪಾಧ್ಯಕ್ಷರೆ, ವಿಜಯಪುರ ಜಿಲ್ಲೆಯ ಸಿಂಧಗಿ ಮತಕ್ಷೇತ್ರವನ್ನು ಆರ್.ಐ.ಡಿ.ಎಫ್–20ರಲ್ಲಿ ಕಾಮಗಾರಿಗೆ ನಬಾರ್ಡ್ ಯೋಜನೆಯಡಿ ಹೊರತುಪಡಿಸಿರುವ ಬಗ್ಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರ ಗಮನ ಸೆಳೆಯುತ್ತೇನೆ.